ಕಥೆ

# ದ್ಯಾವಕ್ಕನ ಗೌರ್ಮೆಂಟ್ ಮನೆ



ಎನ್.ಆರ್. ತಿಪ್ಪೇಸ್ವಾಮಿ
ಕಲೆ: ಪ್ರಭಾಕರ ಹೆಗಡೆ

'ಗೌರ್ಮೆಂಟೋರು ಗೋಶಾಲೆ ಮಾಡಿದಾರಂತೆ. ಅಲ್ಲಿಗಾದರೂ ಈ ದನಗಳನ್ನು ಹೊಡ್ಕೊಂಡು ಹೋಗೋದು ಬಿಟ್ಟು ಎಲ್ಲಿಗೋದ್ನೋ ಈ ಹಾಳಾದೋನು, ಎಲ್ಲಾ ಕೆಲಸನೂ ಹೆಂಗಸರಿಗೆ ಗಂಟು ಹಾಕ್ತಾನೆ. ಊರೊಳಗಿಂದು ಉಸಾಬರಿ ಮಾತಾಡೋಕೋಂತ ಕೆಲಸ ಬಿಟ್ಟು ಹೋಟಲ್ನಾಗೆ ಕೂತ್ಕೊಂಡು ಹಲ್ವೆ ಹೊಡೀತಾನೆ. ಏ... ಬಾರೋ... ನೀನಾದರೂ ದನಗಳನ್ನ ಹೊಡ್ಕೊಂಡು ಹೋಗು'.

ದ್ಯಾವಕ್ಕ ಒಲೆ ಮುಂದೆ ಕೂತ್ಕೊಂಡು ಊರೊಳಗೆ ಹೋದ ತನ್ನ ಗಂಡನ ಬಗ್ಗೆ ಒಂದೇ ಸಮನೆ ಬೈದುಕೊಳ್ಳುತ್ತಾ, ಮಗನಿಗೆ ದನಗಳನ್ನು ಗೋಶಾಲೆ ಕಡೆಗೆ ಕಳಿಸಲು ಹೇಳುತ್ತ ಎದ್ದಳು.

ಬಯಲುಸೀಮೆಯ ರಾಮಪುರ ಬಯಲು ಸೀಮೆಯೆಂದರೆ ಬಯಲೇ ಬಯಲು. ನಾಲ್ಕೈದು ವರ್ಷದಿಂದ ಮಳೆ ಕಾಣದೆ, ನೆಚ್ಚಿಕೊಂಡ ನೆಲದಲ್ಲಿ ಬೆಳೆ ಬೆಳೆಯಲಾಗದೆ ಜನ ತತ್ತರಿಸಿ ಹೋಗಿ, ಹಳ್ಳಿಯಲ್ಲಿ ಯುವಕರೆಲ್ಲಾ ಬೆಂಗಳೂರು ಸೇರಿದ್ದರು. ಮಳೆ ಬಂತು, ಬರಲಿಲ್ಲವೆಂದಲ್ಲ, ಅದು ಎಂತೆಂಥ ಸಮಯದಲ್ಲಿ ಬಂದು ಹೋಯಿತು ನೋಡಿ... ನೆಲ ಹದ ಮಾಡಲಿಕ್ಕೆ ಬರಬೇಕಾದ ಮಳೆ ಬಿತ್ತನೆ ಸಮಯದಲ್ಲಿ ಬಂತು. ಬಿತ್ತನೆ ಮಾಡಬೇಕಾ? ನೆಲ ಹದ ಮಾಡಬೇಕಾ? ಬೇಸಾಯಗಾರರು ಕಂಗಾಲಾದರು. ಇನ್ನು ಮುಂದೆ ಹೇಗೋ ಏನೋ... ಮಳೆ ಬಂದಿದೆ, ಮುಂದೆ ಉತ್ತಿ, ಮಘ ಮಳೆ ಬಂದರೆ ಒಂದಿಷ್ಟು ಬೆಳೆಯಾದರೂ ಆದೀತೆನಿಸಿ ನೆಲ ಹದವಾಗದಿದ್ದರೂ ಬಿತ್ತನೆ ಮಾಡಿದ್ದಾಯ್ತು. ಗಿಡ ಮೇಲೇಳಲಿಕ್ಕೆ ಜಪ್ಪಯ್ಯ ಅಂದರೂ ಮತ್ತೊಮ್ಮೆ ಮಳೆ ಬರಲಿಲ್ಲ. ಇದ್ದ ತೇವದಲ್ಲೇ ಮೊಳಕೆಯೊಡೆದು ಎರಡೆಲೆ ಹಾಕಿದ ಗಿಡಕ್ಕೆ ತೇವ ಕಾಣಲಿಲ್ಲ. ಕೊನೆಗೆ ಇನ್ನೇನು ಗಿಡ ಒಣಗಿ ಹೋದಾವೆನಿಸಿದಾಗ ನಿರೀಕ್ಷಿಸಿದ ಫಸಲಿನ ಮಳೆಯೆನಿಸಿಕೊಂಡ ಮಘ ಮಳೆ ಬರಲೇ ಇಲ್ಲ. ನಂತರದ ಮಳೆ ಬಂದು ಭೂಮಿ ಅಷ್ಟೋ ಇಷ್ಟೋ ತೇವವಾಯಿತು. ಪೈರು ಬೆಳೆದವು, ಪೈರಿನ ಜೊತೆಗೆ ಹೊಲದ ತುಂಬಾ ಕಳೆ ಬೆಳೆಯಿತು. ಕೊನೆಗೆ ಕಳೆ ತೆಗೆಸಲಿಕ್ಕೆ ಕೂಲಿಗಾಗಿ ಹಣ ಖರ್ಚಾಯಿತೇ ಹೊರತು, ಫಸಲು ಕೈಹತ್ತಲಿಲ್ಲ.

ಹೀಗೆ ಮಳೆ ರೈತನೊಂದಿಗೆ ಕಳೆದ ನಾಲ್ಕೈದು ವರ್ಷಗಳಿಂದ ಜೂಜಾಟ ಆಡಿದ್ದರಿಂದ ಈ ಬಾರಿ ನೆಲ ಹದ ಮಾಡಲಿಕ್ಕೂ ಬರಲಿಲ್ಲವಾದ್ದರಿಂದ ಕುಡಿಯುವ ನೀರಿಗೂ, ದನಕರುಗಳ ಮೇವಿಗೂ ತತ್ವಾರ ಶುರುವಾಯಿತು. ಇಂತಹ ಭೀಕರ ಬರಗಾಲಕ್ಕೆ ತುತ್ತಾದ ಹಳ್ಳಿಗಳಲ್ಲಿ ದ್ಯಾವಕ್ಕನ ಹಟ್ಟಿಯೂ ಒಂದು. ಊರಿನ ಹೊರಚ್ಚಿಗೆ ಮೂವತ್ತು ಮೂವತ್ತೈದು ಗರಿ ಹೊದಿಸಲಾದ ಗುಡಿಸಲುಗಳು ಅಸ್ತವ್ಯಸ್ತವಾಗಿ, ಅಡ್ಡಾದಿಡ್ಡಿಯಾಗಿ ಅಲ್ಲಿನ ಜನರ ದನ-ಕರ, ಕುರಿ-ಮೇಕೆ, ಎಮ್ಮೆಗಳ ಸಾಕಾಣಿಕೆಯ ಅನುಕೂಲಕ್ಕೆ ತಕ್ಕಂತೆ ಬೆಳೆದು ಹರಡಿಕೊಂಡಿದ್ದವು. ದ್ಯಾವಕ್ಕ ಜೋರುಬಾಯಿಂದ ಮಾತಾಡುತ್ತಿದ್ದರಿಂದ ಹಟ್ಟಿಯಲ್ಲಿ ಅವಳೇ ಗಂಡನಿಗಿಂತ ಹೆಚ್ಚು ಪ್ರಸಿದ್ಧಳಾಗಿದ್ದಳು.

ದ್ಯಾವಕ್ಕನಿಗೆ ಆರನೇ ಕ್ಲಾಸು ಓದುತ್ತಿರುವ ಒಬ್ಬ